153 ನೇ ೬
SL No:- 90 (+)
೨= 72

# ಕರ್ನಾಟಕ ವಿಧಾನ ಪರಿಷತ್ತು

ಕರ್ನಾಟಕದಲ್ಲಿ ಪುರುಷರು ಮತ್ತು ಮಹಿಳೆಯರಲ್ಲಿ ಕ್ಯಾನ್ಸರ್ ಪ್ರಕರಣಗಳ ಸರಾಸರಿ ವಾರ್ಷಿಕ 1% ಹೆಚ್ಚಳವಾಗುತ್ತಿದ್ದು, ಪ್ರಾರಂಭಿಕ ಹಂತದಲ್ಲಿ ಕ್ಯಾನ್ಸರ್ ಪತ್ತೆ ಮಾಡಿ ಮತ್ತು ಕ್ಯಾನ್ಸರ್ ಗುಣಪಡಿಸುವ ಬಗ್ಗೆ ರೋಗಿಗಳಲ್ಲಿ ಅರಿವು ಮೂಡಿಸಿ ಧೈರ್ಯ ತುಂಬಬೇಕಾಗಿದೆ. ಮುಂದುವರೆದು ಲಸಿಕೆ ನೀಡುವುದರ ಮೂಲಕ ಹೆಚ್ಚು ಪ್ರಚಲಿತದಲ್ಲಿರುವ ಗರ್ಭಕಂಠದ (Cervical) ಮತ್ತು ಸ್ತನ ಕ್ಯಾನ್ಸರ್‌ಗಳನ್ನು ತಡೆಯಬಹುದಾಗಿದೆ. ಉದಾಹರಣೆಗೆ, ಗರ್ಭಕಂಠದ (Cervical) ಕ್ಯಾನ್ಸರ್‌ಗೆ HPV ಲಸಿಕೆ ಮತ್ತು ಯಕೃತ್ತಿನ ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡಲು ಹೆಪಟೈಟಿಸ್ B ಲಸಿಕೆಯನ್ನು ಪಡೆಯುವ ಮೂಲಕ ತಡೆಗಟ್ಟುವಿಕೆ ಸಾಧಿಸಬಹುದಾಗಿದೆ. ಈ ಕುರಿತು ಸರ್ಕಾರದ ಕ್ರಮಗಳ ಬಗ್ಗೆ -

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-**

ಎನ್.ಸಿ.ಡಿ ಕಾರ್ಯಕ್ರಮದಡಿಯಲ್ಲಿ ಬಾಯಿ, ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್‌ಗೆ ಸಂಬಂಧಿಸಿದಂತೆ ತಪಾಸಣೆಯನ್ನು ಎಲ್ಲಾ ಹಂತದ ಆರೋಗ್ಯ ಕ್ಷೇಮ ಕೇಂದ್ರಗಳಲ್ಲಿ ಸಮುದಾಯ ಆರೋಗ್ಯ ಅಧಿಕಾರಿಗಳು ಮಹಿಳೆಯರಿಗೆ ಪ್ರಾರಂಭಿಕ ಹಂತದಲ್ಲೇ ಪತ್ತೆಹಚ್ಚುವ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಈ ಮೇಲಿನ ಕ್ಯಾನ್ಸರ್‌ಗಳಿಗೆ VIA (Visual Inspection with Acetic Acid) ಪರೀಕ್ಷೆ ಹಾಗೂ PAPSMEAR ಪರೀಕ್ಷೆ ಮುಖಾಂತರ ಗರ್ಭಕಂಠದ ಕ್ಯಾನ್ಸರ್, ಸ್ವಯಂ ದೈಹಿಕ ಪರೀಕ್ಷೆ ಮುಖಾಂತರ: ಸ್ತನಕ್ಯಾನ್ಸರ್ ಹಾಗೂ ಬಾಯಿ ಪರೀಕ್ಷೆ ಮುಖಾಂತರ ಬಾಯಿ ಕ್ಯಾನ್ಸರ್ ಪತ್ತೆ ಹಚ್ಚಲಾಗುತ್ತಿದೆ. ಸಂಶಯಾಸ್ಪದ ಪ್ರಕರಣಗಳನ್ನು ದೃಢಪಡಿಸಲು ಮೇಲಿನ ಹಂತದ ಸರ್ಕಾರಿ ಆಸ್ಪತ್ರೆಗಳಿಗೆ ಅಂದರೆ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಿಗೆ ಕಳುಹಿಸಲಾಗುವುದು. ಹೆಚ್ಚಿನ ಚಿಕಿತ್ಸೆಗಾಗಿ ತೃತೀಯ ಹಂತದ ಆಸ್ಪತ್ರೆಗಳಿಗೆ AB-ARK ಅಡಿಯಲ್ಲಿ ಚಿಕಿತ್ಸೆಗಳಿಗಾಗಿ ಕಳುಹಿಸಿಕೊಡಲಾಗುತ್ತದೆ. ಗರ್ಭಕಂಠದ ಕ್ಯಾನ್ಸರ್ ಗೆ ಕೇಂದ್ರ ಸರ್ಕಾರದಿಂದ ಲಸಿಕೆ ನೀಡುವ ಬಗ್ಗೆ ಯಾವುದೇ ಮಾರ್ಗಸೂಚಿ ಸ್ವೀಕೃತಗೊಂಡಿರುವುದಿಲ್ಲ ಮತ್ತು ಲಸಿಕೆ ಸರಬರಾಜು ಆಗಿರುವುದಿಲ್ಲ.

ರಾಷ್ಟ್ರೀಯ ವೈರಲ್ ಹೆಪಟೈಟಿಸ್ ನಿಯಂತ್ರಣ ಕಾರ್ಯಕ್ರಮ ಕೇಂದ್ರ ಸರ್ಕಾರದ ಮಾರ್ಗಸೂಚಿಯನುಸಾರ ಹೆಪಟೈಟಿಸ್ B ಲಸಿಕೆಗಳನ್ನು ಆರೋಗ್ಯ ಕಾರ್ಯಕರ್ತರು ಮತ್ತು ಲೈಂಗಿಕ ಅಲ್ಪ ಸಂಖ್ಯಾತರುಗಳಿಗೆ ನೀಡಲಾಗುತ್ತಿದ್ದು, ಸದರಿ ಲಸಿಕೆಯ ಬಳಕೆಯಿಂದ ಭವಿಷ್ಯದಲ್ಲಿ ಫಲಾನುಭವಿಗಳಿಗೆ ಯಕೃತ್ ಕ್ಯಾನ್ಸರಿನ ಅಪಾಯವನ್ನು ಕಡಿಮೆ ಮಾಡಲು ಸಹಕಾರಿಯಾಗಿದೆ.

**ಸಂಖ್ಯೆ: ಆಕುಕ 58 ಎಸ್.ಟಿ.ಕ್ಯೂ 2024.**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

# ವೈದ್ಯಕೀಯ ಶಿಕ್ಷಣ ಇಲಾಖೆಯ ಉತ್ತರ

ಬ:

ಗರ್ಭಗೊರಳಿನ ಕ್ಯಾನ್ಸರ್ ಮುಖ್ಯವಾಗಿ HPV (ಹ್ಯೂಮ್ ಪ್ಯಾಪಿಲೋಮಾ ವೈರಸ್) ವೈರಸ್ ನಿಂದ ಬರುವುದೆಂದು ಹಲವಾರು ಸಂಶೋಧನೆಗಳಿಂದ ದೃಢಪಟ್ಟಿರುತ್ತದೆ. ಈಗಾಗಲೇ ಸದರಿ HPV ವೈರಸ್‌ಗೆ ಲಸಿಕೆಯು ಲಭ್ಯವಿದ್ದು, ಈ ಲಸಿಕೆಯನ್ನು 9 ರಿಂದ 14 ವರ್ಷದೊಳಗಿನ ಹೆಣ್ಣುಮಕ್ಕಳಿಗೆ ಕೊಡಲು ಸೋಂಕು ರಕ್ಷಣೆ ಕುರಿತಾದ ರಾಷ್ಟ್ರೀಯ ತಾಂತ್ರಿಕ ಸಲಹಾ ಗುಂಪು (ಎನ್‌ಟಿಎಜಿಐ) ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಲ್ಲಿ (ಯುಐಪಿ-ಯೂನಿರ್ಸಲ್ ಇಮ್ಯುನೈಸೇಷನ್ ಪ್ರೋಗ್ರಾಮ್) ಲಸಿಕೆ ನೀಡಲು ಸೂಚಿಸಲಾಗಿದೆ.

ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿಗಳ ಪ್ರಕಾರ ಒಂದು ಅಥವಾ ಎರಡು ಲಸಿಕೆಯನ್ನು 9 ರಿಂದ 14 ವರ್ಷದ ಹೆಣ್ಣು ಮಕ್ಕಳಿಗೆ ನೀಡಬಹುದಾಗಿದೆ ಹಾಗೂ ಇದೇ ರೀತಿ 15 ರಿಂದ 25 ವರ್ಷದ ಮಹಿಳೆಯರು ಕೂಡಾ ಈ ಲಸಿಕೆಯನ್ನು ಪಡೆಯಬಹುದಾಗಿದೆ. 15 ವರ್ಷ ಮೇಲ್ಪಟ್ಟ ಮಹಿಳೆಯರು ಎರಡು ಲಸಿಕೆಗಳನ್ನು ಆರು ತಿಂಗಳ ಅಂತರದಲ್ಲಿ ಪಡೆಯಬಹುದಾಗಿದೆ.

ಈ ಮೇಲಿನ ಲಸಿಕೆಯನ್ನು ಪಡೆದವರಲ್ಲಿ ಶೇ.80 ರಿಂದ 90ರಷ್ಟು ಪ್ರಮಾಣ ಗರ್ಭಗೊರಳಿನ ಕ್ಯಾನ್ಸರ್ ತಡೆಗಟ್ಟಬಹುದಾಗಿದೆ.

ಇದೇ ರೀತಿ ಹೆಪಟೈಟಿಸ್-ಬಿ ಲಸಿಕೆಯನ್ನು ಮಗುವಿನ ಜನನದ ನಂತರ ಹಾಗೂ 06 ತಿಂಗಳ ಅಂತರದಲ್ಲಿ ಬೂಸ್ಟರ್ ಡೋಸ್ ಅನ್ನು ನೀಡಲು ಶಿಫಾರಸ್ಸು ಮಾಡಿದೆ.